ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಮಾನ್ಯ ವಿ.ಸ. ಸದಸ್ಯರು

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 30-5-202

# ರೇವೂರ್ ಬೆಂಬಲಿಗರ ಮೇಲೆ ಕೇಸ್

## ಬಿಸಿಎಂ ಅಧಿಕಾರಿಗೆ ಶಾಸಕರ ಹಿಂಬಾಲಕರಿಂದ ಧಮಕಿ

**ವಿಕ ಸುದ್ದಿಲೋಕ** ಕಲಬುರಗಿ

ಶಾಸಕ ದತ್ತಾತ್ರೇಯ ಪಾಟೀಲ್ ರೇವೂರ್ ವಿರುದ್ಧ ಬಿಸಿಎಂ ಜಿಲ್ಲಾ ಅಧಿಕಾರಿ ರಮೇಶ್



ಸಂಗಾ ಲಂಚದ ಆರೋಪ ಮಾಡಿದ್ದು, ಶಾಸಕರ ಬೆಂಬಲಿಗರು ಧಮಕಿ ಹಾಕಿದ್ದಾರೆಂದು ಆರೋಪಿಸಿ ದೂರು ದಾಖಲಿಸಿದ್ದಾರೆ. ರೇವೂರ್ ಬೆಂಬಲಿಗರಾದ ಪಾಲಿಕೆ ಮಾಜಿ ಸದಸ್ಯ ಪ್ರಭು ಹಾದಿಮನಿ, ಚಂದ್ರಕಾಂತ ಅವರು ಗುರುವಾರ ರಾತ್ರಿ ತಮಗೆ ಕರೆ ಮಾಡಿ ಧಮಕಿ ಹಾಕಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ರಮೇಶ್ ಸಂಗಾ, ವಿಶ್ವವಿದ್ಯಾಲಯ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಇವರ ಸಂಭಾಷಣೆ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿವೆ. ಇದೇವೇಳೆ, ಕರ್ತವ್ಯ ನಿರ್ವಹಿಸುವಲ್ಲಿ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿ ತೋರಿದ ಆರೋಪದ ಮೇಲೆ ಸಂಗಾ ಅವರಿಗೆ ಜಿಲ್ಲಾಧಿಕಾರಿ ಬಿ. ಶರತ್ ನೋಟಿಸ್ ನೀಡಿದ್ದಾರೆ.

**ಅಧಿಕಾರಿ ಪರ ಕಾಂಗ್ರೆಸಿಗರು**

ಘಟನೆ ಸಂಬಂಧ ಶಾಸಕರಾದ ಪ್ರಿಯಾಂಕ್ ಖರ್ಗೆ, ಅಜಯಸಿಂಗ್ ಅವರು ಸಿದ್ದರಾಮಯ್ಯ ಅವರಿಗೆ ವಿವರಿಸಿದರು. ಸುದ್ದಿಗೋಷ್ಠಿ ನಡೆಸಿದ ಸಿದ್ದರಾಮಯ್ಯ, ''ಶಾಸಕ ದತ್ತಾತ್ರೇಯ ವಿರುದ್ಧ ಬಿಸಿಎಂ ಅಧಿಕಾರಿ ಸಂಗಾ ಮಾಡಿರುವ ಲಂಚದ ಆರೋಪ ಗಂಭೀರವಾಗಿದೆ. ಅನುಚಿತವಾಗಿ ವರ್ತಿಸಿದ್ದಲ್ಲದೇ, ವರ್ಗಾವಣೆ ಮಾಡುವುದಾಗಿ ಬೆದರಿಸಿ ದುಡ್ಡು ಕೇಳಿದ್ದಾರೆ. ಸಂಗಾ ಎಲ್ಲವನ್ನೂ ರೆಕಾರ್ಡ್ ಮಾಡಿಕೊಂಡಿದ್ದಾರೆ. ಶಾಸಕರ ವಿರುದ್ಧ ಕೇಸ್ ದಾಖಲಿಸಬೇಕು,'' ಎಂದು ಆಗ್ರಹಿಸಿದರು.

**ಉತ್ತಮ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ ಡಿಸಿ ರಕ್ಷಣೆ ನೀಡಬೇಕು. ಬದಲಾಗಿ ಜಿಲ್ಲಾಧಿಕಾರಿ ಶರತ್, ಅಧಿಕಾರಿಗೆ ನೋಟಿಸ್ ನೀಡಿರುವುದು ನ್ಯಾಯಸಮ್ಮತವಲ್ಲ. ಕೊರೊನಾ ನಿಯಂತ್ರಣಕ್ಕೆ ಗಮನ ಕೊಡಬೇಕಿದ್ದ ಬಿಜೆಪಿ ಹಣ ಗಳಿಕೆಯಲ್ಲಿ ತೊಡಗಿದೆ.**

**- ಪ್ರಿಯಾಂಕ್ ಖರ್ಗೆ** ಶಾಸಕ

**ಶಾಸಕರ ಬೆಂಬಲಿಗರು ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ಮಧ್ಯರಾತ್ರಿ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಪ್ರಾಣ ಬೆದರಿಕೆ ಹಾಕಿದ್ದಾರೆ. ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ನನ್ನ ಆರೋಪಗಳಿಗೂ ದಾಖಲೆಗಳಿವೆ.**

**-ರಮೇಶ ಸಂಗಾ** ಬಿಸಿಎಂ ಕಲಬುರಗಿ ಜಿಲ್ಲಾ ಅಧಿಕಾರಿ

**ಬಿಸಿಎಂ ಅಧಿಕಾರಿಗೆ ಬೆದರಿಕೆ ಹಾಕಿರುವುದು ನನಗೆ ಗೊತ್ತಿಲ್ಲ. ಅವರು ಯಾರು ಎನ್ನುವುದು ನನಗೆ ಗೊತ್ತಿಲ್ಲ, ನನ್ನ ಬಗ್ಗೆ ವಿನಾಕಾರಣ ಆರೋಪ ಮಾಡಿದ್ದು, ಜಿಲ್ಲಾಧಿಕಾರಿಗಳೇ ಈ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ.**

**-ದತ್ತಾತ್ರೇಯ ಪಾಟೀಲ್ ರೇವೂರ್** ಶಾಸಕ